"ನೀವೇ ಅತ್ಯುತ್ತಮ ಸಮುದಾಯವಾಗಿರುತ್ತೀರಿ."

# ಖೈರೆ ಉಮ್ಮತ್

## (ಉತ್ತಮ ಸಮುದಾಯ)

## ಅಭಿಯಾನ

**2011 ಫೆಬ್ರವರಿ 4-13**


**ಜಮಾಅತೆ ಇಸ್ಲಾಮಿ ಹಿಂದ್**

**ಕರ್ನಾಟಕ-ಗೋವಾ ಘಟಕ**

**'ಶಾಂತಿ ಸದನ' 52, II ಮುಖ್ಯರಸ್ತೆ, I ಬ್ಲಾಕ್**

**ಆರ್.ಟಿ. ನಗರ, ಬೆಂಗಳೂರು - 560 032**

**ದೂರವಾಣಿ: 080- 23432273/ Fax: 080- 23534405**

**Email: jihkar@gmail.com**


# ಖೈರೆ ಉಮ್ಮತ್ ಅಭಿಯಾನ

**ಮು**ಸ್ಲಿಮ್ ಸಮುದಾಯ ಇಂದಿಗೂ ಅಲ್ಲಾಹ್ ಮತ್ತು ಆತನ ಸಂದೇಶವಾಹಕರೊಂದಿಗೆ(ಸ) ಗಾಢವಾದ ಸಂಬಂಧವನ್ನು ಹೊಂದಿದೆ. ಅದನ್ನು ನೋಡಬೇಕಾದರೆ ಪವಿತ್ರ ರಮಝಾನ್ ತಿಂಗಳನ್ನು ನೋಡಬೇಕು. ಮುಸ್ಲಿಮರು ಹೆಚ್ಚು ಹೆಚ್ಚು ನಮಾಝ್, ಉಪವಾಸ, ಕುರ್‌ಆನ್ ಪಾರಾಯಣ ಮಾಡುವುದನ್ನು ಮತ್ತು ಆಲಿಸುವುದನ್ನು, ದಾನ ಧರ್ಮಗಳನ್ನು ಮಾಡುವುದನ್ನು ಎಲ್ಲೆಲ್ಲೂ ಕಾಣಬಹುದು.

ಪ್ರವಾದಿ ಮುಹಮ್ಮದ್‌ರೊಂದಿಗೆ(ಸ) ಮುಸ್ಲಿಮರ ಸಂಬಂಧ ಮತ್ತು ಭಕ್ತಿಭಾವಗಳು ರಬೀವುಲ್ ಅವ್ವಲ್ ತಿಂಗಳಲ್ಲಿ ಹೆಚ್ಚಾಗಿರುತ್ತದೆ. ಎಲ್ಲ ಸಭೆ ಸಮಾರಂಭಗಳಲ್ಲಿ ಪ್ರವಾದಿ ಜೀವನದ ಕುರಿತು ಬೆಳಕು ಚೆಲ್ಲಲಾಗುತ್ತದೆ. ಅವರ ಶೀಲ-ಚಾರಿತ್ರ್ಯಗಳು ಮತ್ತು ನೀತಿ-ನಡವಳಿಕೆಗಳ ಕುರಿತು ಭಾಷಣ-ಪ್ರವಚನಗಳಾಗುತ್ತವೆ. ಅವರ ಬದುಕನ್ನು ತಮ್ಮ ಜೀವನದಲ್ಲೂ ಅಳವಡಿಸಿಕೊಳ್ಳುವ ಸ್ಫೂರ್ತಿ ಕೇಳುಗರಲ್ಲುಂಟಾಗುತ್ತದೆ. ಪ್ರವಾದಿಯವರೊಂದಿಗೆ ಭಕ್ತಿ-ಪ್ರೇಮಗಳನ್ನು ಪ್ರದರ್ಶಿಸುವ ಘೋಷಣೆಗಳನ್ನು ಕೂಗಲಾಗುತ್ತದೆ. ಇದೆಲ್ಲ ಶ್ಲಾಘನೀಯ ವಿಷಯಗಳಾಗಿವೆ.

ಆದರೆ ವರ್ಷದಲ್ಲಿ ಒಂದು ದಿವಸ ಮಾತ್ರ ಪ್ರವಾದಿಯವರ ಗುಣಗಾನಗಳನ್ನು ಮಾಡುವ ಮೂಲಕ ಅವರೊಂದಿಗಿನ ಸಂಬಂಧವನ್ನು ಸೀಮಿತಗೊಳಿಸಿದರೆ ಸಾಕೇ? ಅವರು ಯಾವ ಮಹಾನ್ ಕಾರ್ಯವನ್ನು ನಿರ್ವಹಿಸಲಿಕ್ಕಾಗಿ ತಾಯಿಫ್‌ಗೆ ಪ್ರಯಾಣ ಬೆಳೆಸಿದ್ದರೋ ಆ ಕಾರ್ಯದ ಬಗ್ಗೆ ಆಸಕ್ತಿ ಬೇಡವೇ? ಪ್ರವಾದಿತ್ವವನ್ನು ಚೆನ್ನಾಗಿ ನೆನಪಿನಲ್ಲಿಡುವ ಸಮುದಾಯವು ಪ್ರಸ್ತುತ 'ಪ್ರವಾದಿ ದೌತ್ಯ'ವನ್ನು ಕಡೆಗಣಿಸುವುದು ಸರಿಯೇ? ಇದೊಂದು ಮಹತ್ವದ ಪ್ರಶ್ನೆಯಾಗಿದೆ.

ಪ್ರವಾದಿ(ಸ) ತಮ್ಮ ಸಮುದಾಯಕ್ಕೆ ನೀಡಿದ ಆಜ್ಞೆ- ನನ್ನಿಂದ ಪಡೆದುದನ್ನು ಇತರರಿಗೆ ತಲಪಿಸಿರಿ- ಅದು ಒಂದು ವಚನವಾದರೂ ಸರಿ (ಬುಖಾರಿ) - ಎಂದಾಗಿತ್ತು.

ಇಂದು ಜಗತ್ತು ಸತ್ಯದ ಹುಡುಕಾಟದಲ್ಲಿದೆ. ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಮನುಷ್ಯ ಒದ್ದಾಡುತ್ತಿದ್ದಾನೆ. ಬಡತನ, ಬೆಲೆಯೇರಿಕೆ, ಲಂಚಗುಳಿತನಗಳಂತಹ ಭೀಕರ ಸಮಸ್ಯೆಗಳು ಮನುಷ್ಯನನ್ನು ಅಪ್ಪಚ್ಚಿಯಾಗಿ ಮಾಡಿಬಿಟ್ಟಿವೆ. ಈ ಎಲ್ಲ ಸಮಸ್ಯೆಗಳಿಗೆ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯಲ್ಲಿ ಅತ್ಯುತ್ತಮ ಪರಿಹಾರವಿದೆ.

ಪ್ರವಾದಿಯವರು(ಸ) ಹೇಳಿದ - ಕನಿಷ್ಠ ಒಂದು ವಚನವಾದರೂ ಸರಿ. ಅದನ್ನು ಅಲ್ಲಾಹನ ದಾಸರಿಗೆ ತಲಪಿಸಿರಿ ಎಂಬ ಮಾತಿನ ಇಂಗಿತವು ಪ್ರತಿಯೊಬ್ಬನೂ ಈ ಸಂದೇಶ ಪ್ರಚಾರ ಕಾರ್ಯವನ್ನು ತಮ್ಮ ಕಡೆಯಿಂದ ನಿರ್ವಹಿಸಬೇಕು ಎಂದಾಗಿದೆ. ಅಂತ್ಯ ದಿನದ ವರೆಗೂ ಇರುವ ಪ್ರವಾದಿ ದೌತ್ಯವು ಇನ್ನು ಮುಸ್ಲಿಮರ ಮೂಲಕವೇ ನೆರವೇರಬೇಕಾಗಿದೆ. ಈ ಕರ್ತವ್ಯವನ್ನು ನಿರ್ಲಕ್ಷಿಸಿ, ಕೇವಲ ಭಕ್ತಿ-ಭಾವ ಪ್ರದರ್ಶನ ಮಾಡುವುದು, ಪ್ರವಾದಿಯವರ ಆಜ್ಞೆಗಳನ್ನು ಕೇಳಿಯೂ ಕೇಳದಂತೆ ನಟಿಸುವುದು, ಅದಕ್ಕಾಗಿ ಒಂದಿಷ್ಟಾದರೂ ಸ್ಪಂದಿಸದಿರುವುದು ಅವರ ಆಜ್ಞೋಲ್ಲಂಘನೆಯಾಗುವುದಿಲ್ಲವೇ?

ಮುಸ್ಲಿಮ್ ಸಮುದಾಯದ ಕುರಿತು ಪ್ರವಾದಿಯವರು, ನೀವು ಭೂಮುಖದಲ್ಲಿ ಅಲ್ಲಾಹನ ಸಾಕ್ಷಿಗಳಾಗಿರಿ ಎಂದೂ ಹೇಳಿದ್ದಾರೆ. ಅಂದರೆ ಸತ್ಯದ ಜ್ಞಾನವಿರುವುದು ನಿಮಗೆ. ಜನಸಾಮಾನ್ಯರು ಅದರಿಂದ ಅಜ್ಞರಾಗಿದ್ದಾರೆ. ಲೋಕದ ಮುಂದೆ, ಅಲ್ಲಾಹ್ ಯಾರು, ಆತನ ಗುಣಗಳೇನು, ಅವನು ಏನು ಬಯಸುತ್ತಾನೆ, ಏನು ಬಯಸುವುದಿಲ್ಲ, ಏನನ್ನು ಇಷ್ಟಪಡುತ್ತಾನೆ, ಏನನ್ನು ದ್ವೇಷಿಸುತ್ತಾನೆ, ಮಾನವ ಕುಲದ ಒಳಿತು ಯಾವುದರಲ್ಲಿದೆ ಎಂಬಿತ್ಯಾದಿಗಳ ಸಾಕ್ಷ್ಯ ವಹಿಸಿರಿ. ಪವಿತ್ರ ಕುರ್‌ಆನ್ ಇದನ್ನು ಈ ರೀತಿ ಹೇಳುತ್ತದೆ- ಇದೇ ರೀತಿ ನೀವು ಜಗತ್ತಿನ ಮಾನವರ ಬಗ್ಗೆ ಸಾಕ್ಷಿಯಾಗಿರಲಿಕ್ಕೂ ಮತ್ತು ಸಂದೇಶವಾಹಕರು ನಿಮ್ಮ ಬಗ್ಗೆ ಸಾಕ್ಷಿ ಯಾಗಿರಲಿಕ್ಕೂ ನಾವು ನಿಮ್ಮನ್ನು ಒಂದು ಸುಮಧ್ಯ ಸಮುದಾಯ ವನ್ನಾಗಿ ಮಾಡಿದ್ದೇವೆ. (2: 143)

ಲೋಕದ ಮುಂದೆ ಇಸ್ಲಾಮನ್ನು ಪ್ರತಿಪಾದಿಸುವುದು, ಸತ್ಯದ ಸಾಕ್ಷ್ಯ ವಹಿಸುವುದು, ಧರ್ಮ ಕಾರ್ಯಕ್ಕೆ ನೆರವಾಗುವುದು ಮತ್ತು ಶರೀಅತ್ ನಿಯಮಗಳನ್ನು ಜಾರಿಗೊಳಿಸುವುದು ಮುಸ್ಲಿಮರ ಹೊಣೆಗಾರಿಕೆಯಾಗಿದೆ. ಮಾನವ ಪ್ರಕೃತಿ ಒಪ್ಪುವ ಮತ್ತು ಹಿಂದಿನ ಮತ-ಧರ್ಮಗಳಲ್ಲೂ ಇರುವ ಸರ್ವಸಮ್ಮತ ಒಳಿತುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಉಪದೇಶಿಸುವುದು ಹಾಗೂ ಎಲ್ಲ ಕಾಲದ ಎಲ್ಲ ಸಮುದಾಯಗಳೂ ಕೆಟ್ಟದೆಂದು ಭಾವಿಸುವ ಕೆಡುಕುಗಳ ವಿರುದ್ಧ ಸ್ವರವೆತ್ತುವುದು ಮತ್ತು ಅವುಗಳನ್ನು ತಡೆಗಟ್ಟುವುದು ಮುಸ್ಲಿಮ್ ಸಮುದಾಯದ ಕೆಲಸವಾಗಿದೆ. ಈ ಕಡ್ಡಾಯ ಕರ್ತವ್ಯದ ಈಡೇರಿಕೆಯ ಫಲವಾಗಿ ಅಲ್ಲಾಹನು ಅವರಿಗೆ ಒಂದು ವಿಶಿಷ್ಟ ಬಿರುದನ್ನು ನೀಡಿದ್ದಾನೆ. ಮಾನವರ ಸನ್ಮಾರ್ಗ ದರ್ಶನ ಮತ್ತು ಸಂಸ್ಕಾರಗಳಿಗಾಗಿ ನಿಯೋಗಿಸಲಾಗಿರುವ ಅತ್ಯುತ್ತಮ ಜನಕೂಟವು ನಿಮ್ಮದಾಗಿರುತ್ತದೆ. ನೀವು ಒಳಿತಿನ ಆದೇಶವನ್ನೀಯುತ್ತೀರಿ, ಪಾಪ ಕಾರ್ಯಗಳಿಂದ ತಡೆಯುತ್ತೀರಿ ಮತ್ತು ಅಲ್ಲಾಹನ ಮೇಲೆ ವಿಶ್ವಾಸವಿಡುತ್ತೀರಿ. (3:110)

ಅಬೂಸಈದ್ ಖುದ್ರೀ(ರ) ಹೇಳುತ್ತಾರೆ: ಪ್ರವಾದಿ ಹೇಳಿದರು- ನಿಮ್ಮ ಪೈಕಿ ಯಾರಾದರೂ ಸಮಾಜದಲ್ಲಿ ಒಂದು ಕೆಡುಕನ್ನು ಕಂಡಾಗ ಬಲ ಪ್ರಯೋಗಿಸಿ ಅದನ್ನು ತಡೆಗಟ್ಟಿದರೆ ಅಲ್ಲಾಹನ ಹಿಡಿತದಿಂದ ಅವನು ಪಾರಾಗುವನು. ಅವನಿಗೆ ಅಷ್ಟು ಶಕ್ತಿಯಿಲ್ಲದಿದ್ದರೆ ಬಾಯಿಂದಲಾದರೂ ಅದರ ವಿರುದ್ಧ ಸ್ವರವೆತ್ತಿದರೆ, ಆಗಲೂ ಅವನು ಅಲ್ಲಾಹನ ವಿಚಾರಣೆಯಿಂದ ಪಾರಾಗುವನು. ಇನ್ನು ಕೆಡುಕಿನ ವಿರುದ್ಧ ಶಕ್ತಿಯಿಲ್ಲದಿದ್ದರೂ ಮನಸ್ಸಿನಲ್ಲಿ ಅದನ್ನು ದ್ವೇಷಿಸಿದರೆ ಆಗಲೂ ಅವನು ಪಾರಾಗುವನು. ಇದು ಈಮಾನಿನ ಅತ್ಯಂತ ದುರ್ಬಲ ಸ್ಥಿತಿಯಾಗಿದೆ. (ನಸಾಈ)

ಜಮಾಅತೆ ಇಸ್ಲಾಮಿ ಹಿಂದ್ ಈ ದೇಶದಲ್ಲಿ ಕಳೆದ ಆರು ದಶಕಗಳಿಂದಲೂ ಧರ್ಮದ ಪ್ರಚಾರ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಮುಸ್ಲಿಮೇತರ ಬಾಂಧವರಿಗೆ ಇಸ್ಲಾಮಿನ ಸಂದೇಶ ತಲಪಿಸುವುದರ ಜೊತೆಗೆ ಮುಸ್ಲಿಮರಿಗೆ, ಅವರು ಮರೆತು ಹೋದ ಪಾಠವನ್ನು ನೆನಪಿಸಿಕೊಡುವುದು ಜಮಾಅತ್‌ನ ಕಾರ್ಯಕ್ರಮಗಳಲ್ಲಿ ಸೇರಿದೆ. ಏಕೆಂದರೆ ಸಮುದಾಯದಲ್ಲಿ ಜಾಗೃತಿಯುಂಟಾದರೆ ಲೋಕದ ಸುಧಾರಣೆ ಸಾಧ್ಯ. ಮುಸ್ಲಿಮ್ ಸಮುದಾಯದ ಈಮಾನಿನ ಶಕ್ತಿ ಬಲಿಷ್ಠವಾಗಿದೆಯೆಂಬುದು ಸತ್ಯ. ಜಮಾಅತೆ ಇಸ್ಲಾಮಿ ಹಿಂದ್ ಈ ಉದ್ದೇಶಕ್ಕಾಗಿ 2011ರ ಫೆಬ್ರವರಿ 4ರಿಂದ 13ರ ವರೆಗೆ ಕರ್ನಾಟಕ-ಗೋವಾ ರಾಜ್ಯದಾದ್ಯಂತ ಖೈರೆ ಉಮ್ಮತ್ (ಉತ್ತಮ ಸಮುದಾಯ) ಎಂಬ ಒಂದು ಅಭಿಯಾನವನ್ನು ಹಮ್ಮಿಕೊಂಡಿದೆ. ನಿಮ್ಮ ಈ ಕಡ್ಡಾಯ ಕರ್ತವ್ಯದ ನಿರ್ವಹಣೆಗಾಗಿ ಅದು ನಿಮಗೆ ಸಹಾಯ ಮಾಡ ಬಯಸುತ್ತದೆ. ಬನ್ನಿ ಅದು ನಿಮಗಾಗಿ ಕಾಯುತ್ತಿದೆ.